

ಸಿರಿಧಾನ್ಯದ ರೊಟ್ಟಿ ತಯಾರಿಸಿದ ಮಹಿಳೆಯರು

# ‘ಸಿರಿ’ ಪಸರುವ ಸಮಯ

ಜನಸಾಮಾನ್ಯರಲ್ಲಿ ಆರೋಗ್ಯದ ಕಾಳಜಿ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಸಿರಿಧಾನ್ಯಗಳು ಮಹತ್ವ ಪಡೆದುಕೊಂಡಿವೆ. ಸಿರಿಧಾನ್ಯಗಳಾದ ರಾಗಿ, ಜೋಳ, ಸಜ್ಜೆ, ನವಣೆ, ಬರಗು, ಸಾಮೆ, ಅರ್ಕ, ಊದಲು, ಕೊರಲೆಯಲ್ಲಿ ಹೆಚ್ಚು ಪೌಷ್ಟಿಕಾಂಶ ಇದ್ದು, ಅವುಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯೂ ಇದೆ.

‘ಸಹಜ ಸಮೃದ್ಧ’ ಸರ್ಕಾರೇತರ ಸಂಸ್ಥೆ ಸಿರಿಧಾನ್ಯ ಬೆಳೆಯುವ ರೈತರ ನೆರವಿಗೆ ನಿಂತಿದೆ. ಸಿರಿಧಾನ್ಯಗಳ ಬಗ್ಗೆ ರೈತರಿಗೆ ಪ್ರಾತ್ಯಕ್ಷಿಕೆಯೊಂದಿಗೆ ಅರಿವು ಮೂಡಿಸಿ, ಮಾರುಕಟ್ಟೆ ಪರಿಚಯಿಸುವ ಕೆಲಸವನ್ನು ಮಾಡುತ್ತಿದೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಎರೆ ಜಮೀನು ಇದೀಗ ಸಿರಿಧಾನ್ಯ ಬೆಳೆಯುವ ರೈತರ ಪ್ರಯೋಗಶಾಲೆ. ಈ ಹಿಂದೆ ಸಿರಿಧಾನ್ಯ ಬೆಳೆದು, ಕಾಲಕ್ರಮೇಣ ವಾಣಿಜ್ಯ ಬೆಳೆಗಳತ್ತ ಮುಖ ಮಾಡಿದ್ದ ರೈತರನ್ನು ಮತ್ತೆ ಸಿರಿಧಾನ್ಯಗಳನ್ನು ಬೆಳೆಯಲು ‘ಸಹಜ ಸಮೃದ್ಧ’ ಪ್ರೇರೇಪಿಸುತ್ತಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿ ಜೊತೆಗೆ ಒಂದೇ ಜಾಗದಲ್ಲಿ ವಿವಿಧ ಸಿರಿಧಾನ್ಯಗಳನ್ನು ಬೆಳೆಯುವುದು, ಗೃಹಬಳಕೆಗೆ ಬೇಕಾಗುವ ತರಕಾರಿಗಳನ್ನು ಬೆಳೆಯುವುದು, ಸುಧಾರಿತ ಬೆಳೆಗಳನ್ನು ಪರಿಚಯಿಸುವ ಕೆಲಸ ಮಾಡುತ್ತಿದೆ.

ಕುಂದಗೋಳ ತಾಲ್ಲೂಕಿನ ನೀರಲಗಿ, ಮತ್ತಳ್ಳಿ, ತಿಮ್ಮಾಪುರ, ತೀರ್ಥ ಮೊದಲಾದ ಹಳ್ಳಿಗಳಲ್ಲಿ ಮಹಿಳಾ ಸ್ವಸಹಾಯ ಸಂಸ್ಥೆಗಳು ಸಿರಿಧಾನ್ಯಗಳ ಮೌಲ್ಯವರ್ಧನೆಯಲ್ಲಿ ತೊಡಗಿವೆ. ಮಹಿಳೆಯರು ಕೃಷಿ ಕಾಯಕದೊಂದಿಗೆ ಸಿರಿಧಾನ್ಯಗಳ ತರಹೇವಾರಿ ಪದಾರ್ಥಗಳನ್ನು ತಯಾರಿಸಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ರಾಮಾಪುರದ ಲಿಂಗನಗೌಡ ಚನ್ನಬಸುಗೌಡ ಪಾಟೀಲರು ಒಂದು ಎಕರೆ ಜಮೀನಿನಲ್ಲಿ ಏಳು ತರಹದ ಸಿರಿಧಾನ್ಯಗಳನ್ನು ಪ್ರಾಯೋಗಿಕವಾಗಿ ಬೆಳೆದು ಯಶಸ್ಸು ಕಂಡಿದ್ದಾರೆ.

**ನಿರ್ಲಕ್ಷ್ಯಕ್ಕೆ ತುತ್ತಾಗಿದ್ದ ಸಿರಿಧಾನ್ಯಗಳ ಕೃಷಿ ಮತ್ತೆ ರೈತರ ಗಮನಸೆಳೆದಿದೆ. ಉತ್ತಮ ಮಾರುಕಟ್ಟೆ ದೊರೆತಿರುವುದರಿಂದಾಗಿ ರೈತರು ಸಿರಿಧಾನ್ಯಗಳತ್ತ ಆಕರ್ಷಿತರಾಗಿದ್ದಾರೆ.**

■ ಗೋವರ್ಧನ ಎಸ್.ಎನ್.



## ತೀರ್ಥದಲ್ಲಿ ಬೀಜ ಬ್ಯಾಂಕ್

ಕುಂದಗೋಳ ತಾಲ್ಲೂಕಿನ ತೀರ್ಥ ಎಂಬಲ್ಲಿ ಬೀಜ ಬ್ಯಾಂಕ್ ಸ್ಥಾಪಿಸಲಾಗಿದ್ದು, ರಿಯಾಯಿತಿ ದರದಲ್ಲಿ ಸಿರಿಧಾನ್ಯ ಬಿತ್ತನೆ ಬೀಜಗಳನ್ನು ಮಾರಲಾಗುತ್ತಿದೆ. ಎರೆಹುಳು ಗೊಬ್ಬರ, ಜೀವಾಮೃತ ತಯಾರಿಕೆಯ ಅರಿವು ಮೂಡಿಸುತ್ತಿದೆ. ಅಗತ್ಯವಿದ್ದವರಿಗೆ ಬೇಕಾದ ನೆರವನ್ನೂ ಸರ್ಕಾರದ ಮೂಲಕ ಕೊಡಿಸುತ್ತಿದೆ.

ಸಹಜ ಸಮೃದ್ಧ ಸಂಸ್ಥೆಯ ‘ಬೀಜ ಬ್ಯಾಂಕ್’ನಿಂದ ಬಿತ್ತನೆ ಬೀಜ ಪಡೆದರೆ ಹಣ ನೀಡಬೇಕಿಲ್ಲ. ಬದಲಾಗಿ, ಒಂದು ಪೊಟ್ಟಣ ಬಿತ್ತನೆ ಬೀಜ ಪಡೆದ ರೈತರು ಬೆಳೆ ಬೆಳೆದು, ಎರಡು ಪೊಟ್ಟಣ ಬಿತ್ತನೆ ಬೀಜವನ್ನು ವಾಪಸ್ ನೀಡಬೇಕು. ಕೊಡುಕೊಳುವ ಈ ನಂಟಿನಿಂದ ಸಿರಿಧಾನ್ಯ ಬೆಳೆಯ ವಹಿವಾಟಿಗೆ ಭಾವನಾತ್ಮಕ ಆಯಾಮವೂ ದೊರೆತಿದೆ.

ತೀರ್ಥದಲ್ಲಿರುವ ‘ಬೀಬಿ ಫಾತಿಮಾ ಸ್ವಸಹಾಯ ಸಂಘ’ವು ಸಿರಿಧಾನ್ಯ ಸಂಸ್ಕರಣಾ ಘಟಕದ ನಿರ್ವಹಣೆ ಹೊತ್ತಿದೆ. ಸರ್ಕಾರ, ಇತರೆ ಕಂಪನಿಗಳ ನೆರವಿನೊಂದಿಗೆ ಸಂಸ್ಕರಣಾ ಯಂತ್ರಗಳನ್ನು ಅಳವಡಿಸಲಾಗಿದೆ. ಹಲವು ಹಂತಗಳಲ್ಲಿ ಸಂಸ್ಕರಿಸಿದ ಬೀಜಗಳನ್ನು ಅಕ್ಕಿ, ರವೆ ಮಾಡಲಾಗುತ್ತದೆ. ಇದು ವಿವಿಧ ರುಚಿಕರ ಖಾದ್ಯಗಳ ತಯಾರಿಕೆಗೆ ಬಳಕೆಯಾಗುತ್ತದೆ. ಬೀಬಿ ಫಾತಿಮಾ ಸ್ವಸಹಾಯ ಸಂಘದಲ್ಲಿ ಸಿರಿಧಾನ್ಯಗಳ ಮಿಶ್ರಣವುಳ್ಳ ಹಿಟ್ಟು ಮಾರಾಟ ಮಾಡಲಾಗುತ್ತಿದೆ. ಇದನ್ನು ದೋಸೆ, ರೊಟ್ಟಿ, ಮಾಲ್ಟ್ ತಯಾರಿಕೆಗೆ ಬಳಸಲಾಗುತ್ತದೆ. ಇಲ್ಲಿ ರಾಗಿಯ ನೂರಾರು ತಳಿಗಳನ್ನು ಸಂಗ್ರಹಿಸಲಾಗಿದೆ.

## ಮಾರುಕಟ್ಟೆ ವ್ಯವಸ್ಥೆ

ಸಿರಿಧಾನ್ಯಗಳನ್ನು ಬೆಳೆಯಲು ರೈತರು ಮುಂದಾದರೂ ಮಾರುಕಟ್ಟೆ ವ್ಯವಸ್ಥೆ, ಹೊಸ ಪರಿಕಲ್ಪನೆಗಳ ಅರಿವಿಲ್ಲದ ಕಾರಣ ನಷ್ಟ ಅನುಭವಿಸುವ ಸಾಧ್ಯತೆ ಇರುತ್ತದೆ. ಇದಕ್ಕಾಗಿಯೇ ಸಂಸ್ಥೆ, ಮಹಿಳಾ ಸ್ವಸಹಾಯ ಸಂಸ್ಥೆಗಳ ಮೂಲಕ ಸಿರಿಧಾನ್ಯಗಳ ಮೌಲ್ಯವರ್ಧನೆ ಕೈಂಕರ್ಯವನ್ನೂ ಮಾಡುತ್ತಿದೆ. ಸಿರಿಧಾನ್ಯ ಮೇಳಗಳನ್ನು ಆಯೋಜಿಸಿ, ಸಿರಿಧಾನ್ಯಗಳ ಬಹುರೂಪವನ್ನು ಜನತೆಗೆ ಪರಿಚಯಿಸಲಾಗುತ್ತದೆ. ಈ ಮೇಳಗಳಲ್ಲಿ ರೈತರು, ಸಿರಿಧಾನ್ಯಗಳ ಉತ್ಪನ್ನ ತಯಾರಿಸುವವರು, ಮಾರುಕಟ್ಟೆ ಕಂಡುಕೊಳ್ಳಲು ಹಾಗೂ ಈಗಾಗಲೇ ಇರುವ ಮಾರುಕಟ್ಟೆ ವಿಸ್ತರಿಸಲು ಸಾಧ್ಯವಾಗುತ್ತದೆ ಎಂದು ‘ಸಹಜ ಸಮೃದ್ಧ’ ಸಂಸ್ಥೆಯ ಯೋಜನಾ ಸಮನ್ವಯಾಧಿಕಾರಿ ಈಶ್ವರಪ್ಪ ಮಾಹಿತಿ ನೀಡುತ್ತಾರೆ. ■